ಖುಷಿಯಾಯಿತು. ಮನೆಯ ಹಿರಿಯರೊಂದಿಗೆ ಇವಳು ಕಾಡು ಸುತ್ತಿರಬಹುದೆಂದು ನಾನೆಣಿಸಿದರೆ, ಕೇಜಿಯಣ್ಣ ಮತ್ತವರ ನೆಂಟರೊಂದಿಗೆ ಕಾಡು ಸುತ್ತಿದ್ದೇ ಹೆಚ್ಚು ಎಂದಳು ಹುಡುಗಿ.

ನನಗಾಗಿ ಯಾವುದೋ ಮರ ಹತ್ತಿದವಳು ಇಳಿಯುವಾಗ ಚೂಡಿದಾರದ ಪ್ಯಾಂಟು ಹರಿದುಕೊಂಡಿದ್ದಳು. ಅವಳು ಹಾಕುತ್ತಿದ್ದಂಥ ಚೂಡಿದಾರ ನನ್ನತ್ರ ಇರಲಿಲ್ಲ. ಬ್ಯಾಗಿನಲ್ಲಿದ್ದ ಜೀನ್ಸ್ ತೆಗೆದುಕೊಟ್ಟೆ. ಮೊದಲಿಗೆ ಬೇಡವೇ ಬೇಡ ಎಂದು ಗಲಾಟೆ ಮಾಡಿದವಳು, ನೀಲಿ ಜೀನ್ಸ್ ಕಾಣುತ್ತಿದ್ದಂತೆ ಕುತೂಹಲದ ಕಣ್ಣುಗಳಿಂದ ಕೈಗೆತ್ತಿಕೊಂಡಳು. ಎಷ್ಟೆಂದರೂ ಕಾಲೇಜು ಸೇರುತ್ತಿರುವ ಹುಡುಗಿ, ಜೀನ್ಸ್ ಒಲ್ಲೆ ಎನ್ನುತ್ತಾಳೆಯೇ. 'ಅಕ್ಕಾ... ಪ್ಯಾಂಟ್ ಹಾಕ್ರೆ ಬೈತ್ರೇನ ಮನೆಲ್ಲಿ' ಎಂದು ಅನುಮಾನ ಮಾಡಿದಳು. ಮಂಡಿಯವರೆಗೆ ಬರುವಷ್ಟುದ್ದನೆಯ ನನ್ನದೇ ಕುರ್ತಾ ಕೈಲಿಟ್ಟೆ. 'ಇದು ಪ್ಯಾಂಟ್ ಹಾಕ್ದಂಗೆ ಕಾಣೂದಿಲ್ಲ' ಎಂದು ಸಮಾಧಾನಪಟ್ಟಳು. ಅಂತೂ ಒಂದೇ ದಿನದಲ್ಲಿ ನನಗೆ ಸಿಕ್ಕಾಪಟ್ಟೆ ಇಷ್ಟವಾಗಿದ್ದಳು ಪೋರಿ.

ಇದೀಗ ಅವಳಲ್ಲೇ ಕೇಳಬೇಕು ಬೊಮ್ಮಜ್ಜನ ವಿಷಯವನ್ನು ಎನಿಸಿತು. 'ಅಜ್ಜಯ್ಯ ಮೊನ್ನಿತ್ಲಾಗೆ ಹೆಬ್ಬೆಟ್ಟು ಕಡಕಂಡಿದ್ರು. ಸಮಾ ಕಣ್ಣು ಹಾಯೂದಿಲ್ಲ ಅವ್ರೀಗೆ. ಹಾಂಗಾಗಿ ಮನ್ಯಲ್ಲೇ ಇದ್ರು' ಎಂದು ಲಲಿತೆ ಹೇಳಿದ್ದು ಕೇಳಿದ ಮೇಲಂತೂ ಅವರ ಮನೆಗೆ ಹೋಗಲೇಬೇಕು ಎನಿಸತೊಡಗಿತ್ತು. ಅವರೆಲ್ಲಾ ಅಷ್ಟೊಂದು ದೂರ ಮಾಡುವ, ಹೆಸರೆತ್ತಿದರೇ ಹೆದರುವ ಜಾಗವನ್ನೊಮ್ಮೆ ನೋಡಲೇಬೇಕು ಎಂಬ ಕುತೂಹಲಕ್ಕೆ ಮಣಿದು ಈ ವರ್ಷ ಮತ್ತೆ ಬಂದವಳು ನಾನು. ಈಗ ನಾನೇ ಹೇಗಾದರೂ ಮುಂದುವರಿಸಬೇಕಲ್ಲ ವಿಷಯವನ್ನು. ಲಲಿತೆಯನ್ನು ಮನೆಗೆ ತಲುಪಿಸುವ ನೆವ ಮಾಡಿಕೊಂಡು, ಕೆಳಗಿನ ಕೇರಿಯ ಬೊಮ್ಮಜ್ಜನ ಬಿಡಾರದತ್ತ ಜೀಪೋಡಿಸಿದೆ.

ಅಂಗಳದಲ್ಲಿ ತೆಂಗಿನ ಮಡಲನ್ನು ಹಾಕಿಕೊಂಡು ನೇಯುತ್ತಾ ಕೂತಿದ್ದ ಬೊಮ್ಮಜ್ಜ. ಮಳೆಗಾಲ ಶುರುವಾಗುವುದಕ್ಕೆ ಕೆಲವೇ ದಿನಗಳಿದ್ದವು. ಹಾಗಾಗಿ ಜೋರು ಮಳೆಯಲ್ಲಿ ಮಣ್ಣಿನ ಗೋಡೆಗಳಿಗೆ ನೀರು ತಾಗಬಾರದೆಂಬ ಉದ್ದೇಶದಿಂದ 'ಇರ್ಚಲು ತಟ್ಟಿ' ಕಟ್ಟುವುದಕ್ಕೆ ಸಿದ್ಧತೆ ಮಾಡುತ್ತಿರುವುದಾಗಿ ಹೇಳಿದ. ಕಳೆದ ಬಾರಿ ನಡೆದಿದ್ದನ್ನು ಮರೆತಿದ್ದನೋ ಅಥವಾ ನೆನಪಿಸಿಕೊಳ್ಳುವ ಉದ್ದೇಶವೇ ಇರಲಿಲ್ಲವೋ ಗೊತ್ತಾಗಲಿಲ್ಲ. ಅಂತೂ ಸುತ್ತಲಿನ ಏನೇನೋ ವಿಷಯಗಳ ಬಗ್ಗೆ ಮಾತಾಡಿದ. ಕಳೆದ ಮಳೆಗಾಲದಲ್ಲಿ ಹಾವಿನ ಅಧ್ಯಯನ ಮಾಡುವವರು ಬಂದಿದ್ದ ಬಗ್ಗೆಯೆಲ್ಲಾ ಹೇಳಿದ. ಅವನ ಮಾತು ಕೇಳಿದರೆ ಹಿಂದಿನ ಮಳೆಗಾಲದಲ್ಲಿಯೇ ನಾನು ಬಂದಿದ್ದು ಎಂಬುದು ಆತನಿಗೆ ನೆನಪಿದ್ದಂತೆ ಅನಿಸಿತು. ಆದರೆ ನಿರ್ಮಲವಾಗಿ ಹರಿಯುತ್ತಿದ್ದ ಆತನ ನೆನಪನ್ನು ಕೆದಕಿದರೆ ಮತ್ತೆ ರಾಡಿಯಾದೀತೊ ಎಂಬ ಹೆದರಿಕೆಗೆ, ಅಕ್ತಂಗಿ ಗುಂಡಿಯ ಬಗ್ಗೆ ಕೇಳುವುದಕ್ಕೇ ಬಾಯಿ ಬರಲಿಲ್ಲ. ಹಾಗಂತ ಸುಮ್ಮನಿರುವುದಾದರೂ ಹೇಗೆ? ಬಂದಿದ್ದು ನಿನ್ನೆ, ಹೊರಡುವುದು ನಾಡಿದ್ದು! ಇನ್ನೆಷ್ಟು ಮಹಾ ಸಮಯವಿದೆ?

ಆದರೂ ಹಿರಿಜೀವವನ್ನು ಹೆಚ್ಚು ಕೇಳಲು ಮನಸ್ಸಾಗಲಿಲ್ಲ. ರಾತ್ರಿ ಮಲಗುವ ಮುನ್ನ ಅಟ್ಟ ಹತ್ತಿ ಕೂತಿದ್ದೆ. ಕೇಜಿಯಣ್ಣನ ಹೆಂಡತಿ ಲೀಲತ್ತಿಗೆಯೂ ಜೊತೆಗಿದ್ದಳು. ಮನದೊಳಗಿನ ಒತ್ತಡ ತಡೆಯಲಾರದೆ ಬೊಮ್ಮಜ್ಜನ ಮನೆಗೆ ಹೋಗಿದ್ದೆಲ್ಲವನ್ನೂ ಹೇಳಿದೆ. 'ಅಕ್ತಂಗೀರ್ ಗುಂಡಿ ಬಗ್ಗೆ ಅಲ್ಲಿನ ಗಂಡಸ್ರಿಗೊಂದೇ ಅಲ್ಲ, ಹೆಂಗಸ್ರಿಗೂ ಗೊತ್ತಿದ್ದಿಕ್ಕು' ಎಂದಳು ಲೀಲತ್ತಿಗೆ. 'ಏನಾದ್ರೂ ಗೊತ್ತಿದ್ದಿಕ್ಕು. ಅವ್ರೂ ಬಾಯಿ ಬಿಡದಿದ್ರೆ...?' ನನ್ನ ಪ್ರಶ್ನೆಗೆ ಅವಳಲ್ಲೂ ಉತ್ತರ ಇರಲಿಲ್ಲ. 'ಆನು ಈ ಮನೆಗೆ ಸೊಸೆಯಾಗಿ ಬಂದಾಗ ಯನ್ನತ್ತೇರಿಗೆ ಅತ್ತೇರಿದ್ದಿದ್ದ. (ಅಂದರೆ ಕೇಜಿಯಣ್ಣನ ಅಜ್ಜಿ ಇದ್ದರು) ಅವುಕ್ಕೆ ಆ ಹಳೆಯ ಬೊಮ್ಮಜ್ಜನ ಹೆಂಡತಿ ಬೊಮ್ಮಿಯ ಸುದ್ದಿಯೆಲ್ಲಾ ಗೊತ್ತಿತ್ತು. ಆ ಬೊಮ್ಮಿಗೆ ಹದಿಮೂರೊ ಹದಿನಾಲ್ಕೊ ಮಕ್ಕಳು. ಬೊಮ್ಮಜ್ಜ ಕಾಣೆಯಾದ್ಮೇಲೂ ಇಲ್ಲೆಲ್ಲಾ ಬತ್ತಿದ್ದಳ. ನಾಲ್ಕಾರು ದಿನ ಕೊರಗಿ, ಆಮೇಲೆ ಮಾಮೂಲಿ ಇದ್ದಿತ್ತು. ನಿರುಮ್ಮಳ ಕಾಣ್ತಿತ್ತು ಬೊಮ್ಮಿ ಅಂತೆಲ್ಲಾ ಹೇಳತಿದ್ದ ಇವರ ಅಜ್ಜಿ' ಎಂದು ಹಳೆಯ ನೆನಪಿನ ಪಟ್ಲ ಬಿಚ್ಚಿದ್ದಳು. ಹದಿನಾಲ್ಕು ಮಕ್ಕಳು! ಅದ್ಹೇಗೆ ಅಷ್ಟು ಹಡೆದಳೊ ಮಹಾತಾಯಿ. ಅದಾಗಿಯೂ ಗಟ್ಟಿ ಇದ್ದಳಲ್ಲ ನಾಲ್ಕು ತಲೆಮಾರು ಹಿಂದಿನ ಆ ಅಜ್ಜಿ... ಏನಿದ್ದೀತು ಅವಳ ಸಾಮರ್ಥ್ಯ ಎಂದು ಹುಬ್ಬೇರಿಸುವಂತಾಯಿತು.

ಆದರೂ... ಎಲ್ಲೋ ಏನೋ ತಂತಿಯೊಂದು